ಯಾಕೋ ಗಂಗಿರೆಡ್ಡಿಗೆ ವಿಚಿತ್ರವಾದ ಯೋಚನೆಯೊಂದು ಬಂದು 'ಅಲ್ಲಾಲೆ ಶಿವಾರೆಡ್ಡಿ, ಐದು ವರುಷದಿಂದೆ ನಿನ್ನೆಣ್ತಿ ತೀರ್ಕೊಂಡಿದ್ದು... ವರುಷದಿಂದೆ ನಿನ್ನ ದೊಡ್ಮಗ ಆಕ್ಸಿಡೆಂಟಿನಾಗ ಕಾಲು ಮುರಕೊಂಡಿದ್ದು... ವರ್ಷಪೂರ್ತಿ ಕತ್ತೆ ಗೇಯ್ಮೆ ಮಾಡ್ತಿದ್ರು ಗಂಟು ಗಿಟ್ಟದೆ ಊರೆಲ್ಲಾ ಸಾಲ ಮಾಡ್ಕಂಡಿರೋದು... ಇದೆಲ್ಲಾ ಏನ್ಲ ಅನ್ಕಂಡೆ. ಶನಿ ನಿನ್ನ ತಲಕಾಯಿ ಮೇಕೆ ಕುಂತವ್ನೆ. ಈ ಶ್ರಾವಣದಾಗೆ ಶನಿಮಾತ್ಮನ ಕಥೆ ಮಾಡ್ಸು... ನಾನೆ ಬರ್ತೀನಿ. ಆಗ ನೋಡು ನಿನ್ನ ನಸೀಬು' ಎಂದು ನುಡಿದು ಗೆದ್ದ ಹುಮ್ಮಸ್ಸಿನಲ್ಲಿ ನಿಂತುಕೊಂಡ.

ಅದಕ್ಕೆ ಶಿವಾರೆಡ್ಡಿ 'ವೋಗ್ಲಾ ಬೋಸುಡಿ... ಕಥೆ ಮಾಡಿಸ್ಬೇಕಂತೆ ಕಥೆ. ನೋಡ್ತಿರು, ಈ ಸಲೀಕೆ ಎಲ್ಡು ಎಕರೇಲಿ ಟೊಮಾಟೊ ಆಕ್ತಿವ್ನಿ. ಕೋಟಿ... ಕೋಟಿ ಎತ್ತುತೀನಿ. ಬೇಕಾರೆ ಎಣಿಸೋಕೆ ನಿನ್ನೆ ಕರೀತೀನಿ. ಕಥೆ ಮಾಡ್ತಾನಂತೆ ಕಥೆ, ಅಲ್ಲಾಲೆ ನಿಂಕೇ ಸರಿಯಾಗಿ ಜ್ಞಾಪುಕಿಲ್ಲ. ಎಲ್ಲೋ ಒಂದೆರಡು ಲೇನು ಹಾಡ್ತೀಯಸ್ಟೆ. ಆಸ್ಟು ವರ್ಷ ಆಗೋಗ್ಯೆತೆ' ಎಂದು ನುಡಿದು ಒಂದು ಹೆಜ್ಜೆ ಇಟ್ಟ. ಗಂಗಿರೆಡ್ಡಿ 'ಇಲ್ಲಾ ಶಿವಾರೆಡ್ಡಿ, ನಂಕೆ ಎಲ್ಲಾ ಜ್ಞಾಪುಕೈತಿ. ಬುಕ್ಕೂ ಮಡಿಗಿದೀನಿ. ಗಂಗರಾಜು ಗುರುಗೋಳ ಕೈನಾಕೆ ಮೆದುಗಿರೋನೋ ನಾನು. ಅಸ್ಟೊಂದು ಸುಲುಕುನ ಅನ್ಕೊಬೇಡ' ಎಂದು ನುಡಿದು ಶಿವಾರೆಡ್ಡಿಯನ್ನು ಮತ್ತೆ ತಡೆದ. ಅವನು 'ಓ ಕಂಡಿವ್ನಿ ಸುಮ್ಕಿರ್ಲ. ಆಯಪ್ಪ ಬರೀ ಉಪಕತಿಗೋಳ್ನೆ ಏಳ್ಕಂಡು ಕಾಲ ತಳ್ತಿದ್ದ. ನಾನೂ ಆ ಕಾಲ್ದಾಗ ಕೇಳ್ತಿದ್ನಲ್ಲ. ನೀನೂ ಪಾರಾಯಣ ಮಾಡ್ಬೇಕಾರೆ ತೊದಲ್ತಿದ್ದೆ. ನಂಕೆಲ್ಲಾ ಗೊತ್ತು. ಅಲ್ಲಾಲೆ ಶನಿ ನನ್ನ ತಲಕಾಯಿ ಮೇಕೆ ಕೂತಿದೆ ಅಂತೇಳ್ತೀಯಲ್ಲ... ಐವತ್ತು ವರ್ಷ ಆಯ್ತು, ಇನ್ನೂ ನಿಂಕೆ ಮದುವೇನೆ ಆಗಿಲ್ಲ. ಯಾರ ತಲೆ ಮೇಕ್ಲ ಶನಿ ಕೂತಿರೋದು? ನಿನ್ನಣ್ಣನ ಉಪಾಯ ನಿಂಕೆ ಇನ್ನೂ ಅರ್ಥಾನೆ ಆಗ್ತಿಲ್ವಲ್ಲೋ...' ಎಂದು ನುಡಿದು ಬಿರಬಿರನೆ ನಡೆದುಬಿಟ್ಟ.

ಗಂಗಿರೆಡ್ಡಿ ಶಿವಾರೆಡ್ಡಿಯ ಬೆನ್ನಿನ ಕಡೆಗೇ ನೋಡತೊಡಗಿದ. ಅದು ಬಹುಬೇಗನೆ ಮರಗಳ ಒಡಲಲ್ಲಿ ಮರೆಯಾಯಿತು. ಯಾರಾದರೂ ಮದುವೆಯ ಪ್ರಸ್ತಾಪ ಮಾಡಿದರೆ ಅವನು ಮಾತೇ ಬಾರದವನಂತೆ ಮೂಗನಾಗಿಬಿಡುತ್ತಾನೆ. ಈ ಮುಂಚೆ ಹಲವು ಮಂದಿ ಗಂಗಿರೆಡ್ಡಿಯ ಅಣ್ಣ ಬೇಕಂತಲೆ ಉಪಾಯ ಮಾಡಿ ಅವನ ಮದುವೆಯನ್ನು ತಪ್ಪಿಸುತ್ತಿದ್ದಾನೆ; ಗಂಗಿರೆಡ್ಡಿ ಜೀವನಪೂರ್ತಿ ಮದುವೆಯಾಗದಿರುವ ಹಾಗೆ ನೋಡಿಕೊಂಡು ಇರುವ ಎಲ್ಲಾ ಆಸ್ತಿಯನ್ನು ತನ್ನ ಮಕ್ಕಳಿಗೇ ಬರುವ ಹಾಗೆ ಯೋಜನೆ ಹಾಕಿಕೊಂಡು ಕಾಯುತ್ತಿದ್ದಾನೆ ಎಂದು ಹೇಳಿರುವುದುಂಟು. ಅವನಿಗೆ ಇಂದಿಗೂ ತನ್ನ ಅಣ್ಣನ ಮೇಲೆ ಅಥವ ಅತ್ತಿಗೆ ಮೇಲೆ ಯಾವುದೇ ರೀತಿಯ ಅನುಮಾನ ಬರುವುದಿಲ್ಲ. ಅಷ್ಟು ಚನ್ನಾಗಿ ನೋಡಿಕೊಳ್ಳುತ್ತಾರೆ. ಅವನಿಗೆ ಇಷ್ಟವಾದ ಅಡುಗೆಯನ್ನು ಮಾಡಿಸುವುದರಿಂದ ಹಿಡಿದು ಪ್ರತಿ ದೀಪಾವಳಿ ಯುಗಾದಿಗೆ ಹೊಸಬಟ್ಟೆ ಕೊಡಿಸಿ, 'ನಮ್ಮ ದೊಡ್ಡ ಮಗ' ಎಂದು ನೆಂಟರಿಷ್ಟರ ಬಳಿ ಹೇಳಿಕೊಳ್ಳುವವರೆಗೆ ಅವನಿಗೆ ಅಪರಿಮಿತ ಪ್ರೀತಿಯೆ ಕಾಣಿಸುತ್ತದೆ. ಈಗಿನ ಕಾಲದ ಜನಗಳೆ ಹಾಗೆ. ಯಾರಾದರೂ ಹೊಂದಿಕೊಂಡು ಬಾಳುತ್ತಿದ್ದರೆ ಅವರನ್ನು ಬೇರ್ಪಡಿಸುವ ಕಸರತ್ತುಗಳನ್ನು ಬಲು ಉಪಾಯದಿಂದಲೆ ಮಾಡುತ್ತಾರೆನ್ನುವುದು ಗಂಗಿರೆಡ್ಡಿಗೂ ತಿಳಿದಿರುವಂತದ್ದೆ. ಹಾಗಾಗಿ ಅದರ ಬಗ್ಗೆ ಹೆಚ್ಚಿಗೆ ತಲೆಕೆಡಿಸಿಕೊಳ್ಳಲಿಲ್ಲವಾದರೂ ಮದುವೆಯೆಂಬ ವಿಷಯ ಅವನ ಮೆದುಳು ಪೂರಾ ತುಂಬಿಕೊಂಡಿತ್ತು. ಎಷ್ಟೋ ಬಾರಿ ಅವನಿಗೆ ತಾನು ಒಂಟಿ ಅನಿಸುವುದುಂಟು. ತನ್ನೊಳಗೆಲ್ಲವನ್ನು ತಿಳಿದುಕೊಳ್ಳಬಲ್ಲ ಏನೆಲ್ಲವನ್ನು ಮುಚ್ಚುಮರೆಯಿಲ್ಲದೆ ಹಂಚಿಕೊಳ್ಳಬಲ್ಲ ಜೊತೆಗಾತಿಯ ಬಯಕೆ ಅವನಿಗೆ ಬಹಳ ವರ್ಷಗಳಿಂದಲೂ ಇರುವುದುಂಟು. ಇನ್ನೇನು ಮದುವೆ ಆಗೇಹೋಯಿತು ಎನ್ನುವ ಹೊತ್ತಿನಲ್ಲೆ ಇದು ಸರಿಯಿಲ್ಲ, ಅದು ಆಗಿಬರಲ್ಲ, ಜಾತಕ ಕೂಡಿ ಬರ್ತಿಲ್ಲ, ಮದುವೆಯಾದ ಒಂದು ವರ್ಷದೊಳಗೆ ಗಂಡು ತೀರ್ಕೋತಾನೆ ಅಥವಾ ಗಂಡಿನ ಅಣ್ಣ ತೀರ್ಕೋತಾನೆ... ಹೀಗೆ ಕಾರಣಗಳು ನೂರಾರು ಹುಟ್ಟಿಕೊಂಡು ಗಂಗಿರೆಡ್ಡಿ ಒಂಟಿಯಾಗೆ ಉಳಿದುಬಿಟ್ಟ. ಎಷ್ಟೋ ಬಾರಿ ತನಗೆ ಅಣ್ಣನ ಆಸರೆ ಇಲ್ಲದಿದ್ದರೆ ಒಂಟಿತನದ ಅಲಗಿನ ಮೇಲೆ ಬಿದ್ದು ತನ್ನ ದೇಹ ಇಬ್ಭಾಗವಾಗಿಬಿಡುತ್ತಿತ್ತೇನೋ ಎಂದು ಅವನಿಗೆ ಅನಿಸಿರುವುದುಂಟು. ಅಣ್ಣ ಅತ್ತಿಗೆ ಅವರ ಮಕ್ಕಳು ಮತ್ತವರೆಲ್ಲರ ಪ್ರೀತಿಯೆ ತನ್ನನ್ನು ಇಲ್ಲಿಯವರೆಗೆ ಬದುಕಿಸಿರುವುದು ಎಂದೇ ಅವನು ನಂಬಿದ್ದಾನೆ. ಇಷ್ಟೆಲ್ಲದರ ನಡುವೆ ತನಗೆ ಇನ್ನೂ ಮದುವೆ ಆಗದೆ ಹಾಗೇ ಉಳಿದಿರುವುದಕ್ಕೆ ಶನಿಯೆ ಕಾರಣವಿರಬಹುದೆ?